# ಬಹುರೂಪಿ ಸಾಹಾ






ಭಾರತದ ಮೇಘನಾದ್ ಸಾಹಾ ಜಗದ್ವಿಖ್ಯಾತ ಖಭೌತ ವಿಜ್ಞಾನಿ ಹಾಗೂ ಸಮಾಜ ವಿಜ್ಞಾನಿ. ವಿಜ್ಞಾನಿಗಳು ಇಷ್ಟಪಡುವ ದಂತಗೋಪುರವನ್ನು ಒಲ್ಲದ ಸಾಹಾ ಸದಾಕಾಲ ಜನರ ನಡುವೆ ಇರಲು ಬಯಸಿದವರು. ಆ ಕಾರಣದಿಂದಲೇ ರಾಜಕಾರಣದಲ್ಲೂ ತಮ್ಮ ಛಾಪು ಮೂಡಿಸಿದ್ದವರು. ೧೨೫ನೇ ಜನ್ಮ ವಾರ್ಷಿಕೋತ್ಸವ (ಅ. 6 ಜನ್ಮದಿನ) ಸಂದರ್ಭದಲ್ಲಿ ಸಾಹಾ ವ್ಯಕ್ತಿತ್ವದ ವಿವಿಧ ಮಗ್ಗುಲುಗಳ ಕುಡಿನೋಟ.

**■ ಪ್ರೊ. ಸಬ್ಯಸಾಚಿ ಚಟರ್ಜಿ**

'ನೀನೇನೋ ಬಹಳ ಪ್ರಸಿದ್ಧನಾಗಿದ್ದೀಯಂತೆ, ಏನು ಮಾಡಿರುವೆ ಅಂಥಾದ್ದು?'

–ಒಬ್ಬ ವಿಜ್ಞಾನಿಗೆ ಆತನ ತಂದೆಯ ಸ್ನೇಹಿತರೊಬ್ಬರು ಕೇಳಿದ ಪ್ರಶ್ನೆ. ಅದಕ್ಕೆ ವಿಜ್ಞಾನಿಯ ಸರಳ ಉತ್ತರ – 'ಉಷ್ಣ ಅಯಾನೀಕರಣ ಸಿದ್ಧಾಂತ'ದ ಬಗ್ಗೆ ಎನ್ನುವುದಾಗಿತ್ತು. ಪ್ರಶ್ನೆ ಕೇಳಿದವರು ವಿಜ್ಞಾನಿಗೆ ಪ್ರಾಥಮಿಕ ಶಿಕ್ಷಣ ನೀಡಿದ ಮೇಷ್ಟ್ರು ಆಗಿದ್ದರಿಂದ ಆ ಖದರಿನಲ್ಲಿಯೇ ಮತ್ತೆ ಹೇಳಿದರು: 'ಇದರಲ್ಲೇನಿದೆ ಹೊಸದು, ಇದೆಲ್ಲಾ ವೇದದಲ್ಲಿದೆ'!

ವೈಜ್ಞಾನಿಕ ಮನೋಭಾವಕ್ಕೆ ಇಂಥ ಪ್ರಶ್ನೆಗಳು ಎದುರಾಗುವುದು ಸಹಜ. ವಿಜ್ಞಾನಿ ತಮ್ಮ ಪ್ರತಿಪಾದನೆಯನ್ನು ಮುಂದುವರಿಸುತ್ತ, ಪ್ರಾಚೀನ ಕಾಲದಿಂದ ಹಿಡಿದು ಆರ್ಯಭಟ–ಭಾಸ್ಕರರ ಕಾಲ ಮತ್ತು ಇಸ್ಲಾಮಿಕ್ ವಿದ್ವಾಂಸರ ಕಾಲದವರೆಗೆ, ಕೊನೆಯಲ್ಲಿ ಪುನರುತ್ಥಾನ ಯುಗದ ಯುರೋಪಿನಲ್ಲಿ ಕೋಪರ್ನಿಕಸ್, ಗೆಲಿಲಿಯೋ, ಕೆಪ್ಲರ್, ನ್ಯೂಟನ್, ಹ್ಯಾಲಿ, ಇತ್ಯಾದಿ ವಿಜ್ಞಾನಿಗಳ ಮಹತ್ವದ ಸಂಶೋಧನೆಗಳವರೆಗೆ ಖಗೋಳ ವಿಜ್ಞಾನದಲ್ಲಾದ ಜ್ಞಾನದ ವಿಕಾಸದ ಬಗ್ಗೆ ವಿವರಿಸಿದರು. ಮೇಷ್ಟ್ರು ಶಾಂತಚಿತ್ತದಿಂದ ಎಲ್ಲವನ್ನೂ ಕೇಳಿಸಿಕೊಂಡು ಮತ್ತದನ್ನೇ ನುಡಿದರು: 'ಇದೆಲ್ಲ ವೇದಗಳಲ್ಲಿದೆ'.

ವಿಜ್ಞಾನಿ ತುಂಬಾ ಸಹನೆಯಿಂದ – ಐನ್‌ಸ್ಟೈನ್, ಬೋಹ್ರ್ ಅವರ ಸಂಶೋಧನೆಗಳು ಮತ್ತು ಬೋಹ್ರ್ ಮಾದರಿಯನ್ನು ಆಧರಿಸಿ ತಾವು ಕಂಡುಹಿಡಿದಿದ್ದ ಅನಿಲಗಳಲ್ಲಿ ಉಷ್ಣ ಅಯಾನೀಕರಣ ಸಮತೋಲನದ ತೀರ್ಪು ಎಂಬಂತೆ ನುಡಿದರು. ಮೇಷ್ಟ್ರು ನಿಲುವು ಬದಲಾಗಲೇ ಇಲ್ಲ: 'ಇದೆಲ್ಲವೂ ಈಗಾಗಲೇ ವೇದಗಳಲ್ಲಿ ಹೇಳಿದೆಯಪ್ಪ'.

ತಮ್ಮ ಮೇಷ್ಟ್ರು ಅಷ್ಟೊಂದು ಆತ್ಮವಿಶ್ವಾಸದಿಂದ ಹೇಳಿದ್ದನ್ನು ಕೇಳಿದ ವಿಜ್ಞಾನಿ, ವೇದಗಳಲ್ಲಿ ಇವುಗಳ ಕುರುಹುಗಳೇನಾದರೂ ಇದ್ದಿರಬಹುದೇ ಎಂಬ ಶಂಕೆಯಿಂದ ಅವುಗಳ ಆಳವಾದ ಅಧ್ಯಯನ ಮಾಡಿದರು. ಮೇಷ್ಟ್ರು ಹೇಳಿದ್ದು ಕೇವಲ ಅಂಧಾಭಿಮಾನದ ಮಾತು ಎಂಬುದು ಅರಿವಾಯಿತು. ಆ ಅರಿವನ್ನು ಜಗಕ್ಕೆ ಹಬ್ಬಿಸಿದ ಕೀರ್ತಿ ಖಂಡಿತವಾಗಿ ಆ ವಿಜ್ಞಾನಿಗೆ ಸಲ್ಲಬೇಕು. ಆ ವಿಜ್ಞಾನಿ ಮತ್ತಾರೂ ಅಲ್ಲ ನಮ್ಮವರೇ ಆದ ಮೇಘನಾದ್ ಸಾಹಾ. ಅವರು 1930ರಲ್ಲಿ ಒಮ್ಮೆ ಸಾಹಾ ತಮ್ಮ ಹಳ್ಳಿಗೆ ಹೋಗಿದ್ದಾಗ ಮೇಲಿನ ಪ್ರಸಂಗ ನಡೆದಿತ್ತು.

ಇದೇ ಅಕ್ಟೋಬರ್ 6, ಖಭೌತವಿಜ್ಞಾನದಲ್ಲಿ ಹೊಸ ಅಧ್ಯಾಯವನ್ನೇ ತೆರೆದ, ವಿಜ್ಞಾನ ತಂತ್ರಜ್ಞಾನವು ದೇಶದ ಬಡತನವನ್ನು ಹೋಗಲಾಡಿಸುವುದರಲ್ಲಿ ನೆಲಕ್ಕಿಳಿದು ದುಡಿಯಬೇಕು ಎಂದು ಪ್ರಖರವಾಗಿ ಪ್ರತಿಪಾದಿಸುತ್ತಿದ್ದ, ಅಪರೂಪದ ವಿಜ್ಞಾನಿ––ಸಂಸದ ಮೇಘ್‌ನಾದ್ ಸಾಹಾ ಅವರ 125ನೇ ಜನ್ಮ ವಾರ್ಷಿಕೋತ್ಸವ.

## ಅನನ್ಯ 'ಸಾಹಾ ಸೂತ್ರ'

19ನೇ ಶತಮಾನದ ಹೊತ್ತಿಗೆ ಭೌತವಿಜ್ಞಾನವು ಖಗೋಳವಿಜ್ಞಾನಕ್ಕೆ ಒಂದು ಹೊಸ ಸಾಧನವನ್ನು ನೀಡಿತು. ಅದುವೇ 'ಸ್ಪೆಕ್ಟ್ರೋಸ್ಕೋಪಿ'. ಸೂರ್ಯನ ಬೆಳಕನ್ನು ಒಂದು ಪ್ರಿಸ್ಮ್ ಮೂಲಕ ಹಾಯಿಸಿದಾಗ ಬಿಳಿ ಬೆಳಕು ಏಳು ಬಣ್ಣಗಳಲ್ಲಿ ಒಡೆಯುತ್ತದೆ ಎಂದು ಹದಿನೇಳನೇ ಶತಮಾನದಲ್ಲಿ ನ್ಯೂಟನ್ ತೋರಿಸಿಕೊಟ್ಟಿದ್ದ, ಇದನ್ನು ಬಿಳಿ ಬೆಳಕಿನ ಸ್ಪೆಕ್ಟ್ರಮ್ ಎಂದು ಕರೆಯಲಾಗುತ್ತದೆ. 19ನೇ ಶತಮಾನದಲ್ಲಿ ಈ ಸ್ಪೆಕ್ಟ್ರಮ್‌ಗಳಲ್ಲಿ ಕೆಲವು ಕಪ್ಪುರೇಖೆಗಳಿರುವುದು ಗಮನಕ್ಕೆ ಬಂತು ಮತ್ತು ಅವು ಸೂರ್ಯನಲ್ಲಿರುವ ಮೂಲವಸ್ತುಗಳ ಕುರಿತು ಸುಳಿವು ನೀಡುತ್ತವೆ ಎಂದು ಕಂಡುಕೊಳ್ಳಲಾಯಿತು. ಮೇಘ್‌ನಾದ್ ಸಾಹಾ ಅಭಿವೃದ್ಧಿಪಡಿಸಿದ 'ಸಾಹಾ ಸೂತ್ರ'ವು ಖಭೌತ ವಿಜ್ಞಾನದಲ್ಲಿ ನಕ್ಷತ್ರಗಳ ಸ್ಪೆಕ್ಟ್ರಮ್‌ಗಳನ್ನು ವಿಶ್ಲೇಷಿಸುವ ಮೂಲ ಸಾಧನವನ್ನು ಒದಗಿಸಿತು. ಇದರ